**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 21-01-2026:**

**ಮುಂದುವರೆದ ಪಾಟೀಸವಾಲುಃ**

5.ಇಂತಹ ಪ್ರಕರಣಗಳಲ್ಲಿ ತನಿಖೆಯನ್ನು 4 ವಿಭಾಗಗಳಲ್ಲಿ ಅಂದರೆ ಎ ಬಿ ಸಿ ಡಿ ಎಂದು ವಿಭಾಗಿಸಿಕೊಂಡು ತನಿಖೆ ನಡೆಸುತ್ತೇವೆ ಎಂದರೆ ನಿಜ. ಎ ವಿಭಾಗದಲ್ಲಿ ನಾವು ಚೆಕ್ ಅವಧಿಗಿಂತ ಹಿಂದೆ ಯಾವುದಾದರೂ ಆಸ್ತಿ ಮತ್ತು ಆದಾಯವನ್ನು ಹೊಂದಿದ್ದರು ಎನ್ನುವ ಬಗ್ಗೆ ತನಿಖೆ ಮಾಡುತ್ತೇವೆ ಎಂದರೆ ನಿಜ. ಬಿ ವಿಭಾಗದಲ್ಲಿ ಚೆಕ್ ಅವಧಿಯಲ್ಲಿ ಹೊಂದಿದ ಆಸ್ತಿಗಳ ಬಗ್ಗೆ ತನಿಖೆ ಮಾಡುತ್ತೇವೆ. ಸಿ ವಿಭಾಗದಲ್ಲಿ ಚೆಕ್ ಅವಧಿಯಲ್ಲಿ ಗಳಿಸಿದ ಆದಾಯದ ಬಗ್ಗೆ ತನಿಖೆ ಮಾಡುತ್ತೇವೆ. ಡಿ ವಿಭಾಗದಲ್ಲಿ ಚೆಕ್ ಅವಧಿಯಲ್ಲಿ ಒಟ್ಟು ಖರ್ಚಿನ ಬಗ್ಗೆ ತನಿಖೆ ಮಾಡುತ್ತೇವೆ.

6.ಎ ವಿಭಾಗದಲ್ಲಿ ತನಿಖೆಯನ್ನು ನಡೆಸುವಾಗ ಆಸ್ತಿ ಮತ್ತು ಆದಾಯ ಹೊಂದಿದ್ದು ಕಂಡುಬಂದರೆ ಅದನ್ನು ಬಿ ವಿಭಾಗದಲ್ಲಿ ತನಿಖೆ ಮಾಡುವಾಗ ಎ ಅವಧಿಯಲ್ಲಿ ಗಳಿಸಿದ ಆಸ್ತಿಯನ್ನು ಬಿಟ್ಟು ಆದಾಯವನ್ನು ಮುಂದಕ್ಕೆ ತೆಗೆದುಕೊಳ್ಳಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿತರು ಚೆಕ್ ಅವಧಿಗಿಂತ ಹಿಂದಿನ ಅವಧಿಯಲ್ಲಿ ಗಳಿಸಿದ ಆದಾಯ ಮತ್ತು ಆಸ್ತಿಯ ಬಗ್ಗೆ ನಾನು ತನಿಖೆ ನಡೆಸಿಲ್ಲ.

7.ಸೋರ್ಸ್ ವರದಿ ಪೂರ್ವದಲ್ಲಿ ಪ್ರಾಥಮಿಕ ತನಿಖೆ ಮಾಡಿರುತ್ತಾರೆ ಎಂದರೆ ನಿಜ. ಚೆಕ್ ಅವಧಿಯಲ್ಲಿ ಮತ್ತು ಅದಕ್ಕಿಂತ ಪೂರ್ವದಲ್ಲಿ ಹೊಂದಿರುವ ಆದಾಯ ಖರ್ಚು ವೆಚ್ಚ ಮತ್ತು ಆಸ್ತಿಗಳ ಬಗ್ಗೆ ತನಿಖೆ ನಡೆಸುವುದು ಮತ್ತು ಅದು ಹೆಚ್ಚು ಕಡಿಮೆ ಸೋರ್ಸ್ ಅವಧಿಯ ನಂತರ ಎ ಯಿಂದ ಡಿ ವಿಭಾಗದಲ್ಲಿ ನಡೆಸುವ ತನಿಖೆಯ ಅಂಶಕ್ಕೆ ಹೆಚ್ಚು ಕಡಿಮೆ ಹೋಲಿಕೆಯಾಗುತ್ತದೆ ಎಂದರೆ ಸರಿ.

8.ಸೋರ್ಸ್ ವರದಿಯಲ್ಲಿ ಆರೋಪಿತರ ಚೆಕ್ ಅವಧಿಯ ಆದಾಯ 21ಲಕ್ಷ ಎಂದು ನಮೂದಾಗಿದೆ ಎಂದರೆ ನಿಜ. ಹಾಗೆಯೇ ಖರ್ಚು 10 ಲಕ್ಷ, ಆಸ್ತಿ 38 ಲಕ್ಷ ಎಂದು ಇದೆ ಎಂದರೆ ನಿಜ. ದೋ.ಪಟ್ಟಿ ಸಲ್ಲಿಸುವ ಸಮಯದಲ್ಲಿ ಆ ಆಸ್ತಿಯ ಮೌಲ್ಯ 78ಲಕ್ಷ ರೂಪಾಯಿ ಎಂದು ಕಾಣಿಸಿದ್ದು

ಉದ್ದೇಶಪೂರ್ವಕವಾಗಿ ಮೌಲ್ಯವನ್ನು ದ್ವಿಗುಣಗೊಳಿಸಿ ಕಾಣಿಸಿದ್ದೇವೆ ಎಂದರೆ ಸಾಕ್ಷಿಯು ದೋ.ಪಟ್ಟಿಯನ್ನು ನಾನು ಸಲ್ಲಿಸಿಲ್ಲ, ಆದ್ದರಿಂದ ನನಗೆ ಸಂಬಂಧಿಸಿಲ್ಲ ಎನ್ನುತ್ತಾರೆ. ಹಾಗೆಯೇ ಕೌಟುಂಬಿಕ ಖರ್ಚು 10ಲಕ್ಷದಿಂದ 31 ಲಕ್ಷಕ್ಕೆ ಏರಿಸಿ ದೋ.ಪಟ್ಟಿಯಲ್ಲಿ ಕಾಣಿಸಿದ್ದೇವೆ ಎಂದರೆ ಸಾಕ್ಷಿಯು ನನಗೆ ಸಂಬಧಿಸಿದ್ದಲ್ಲ ಎನ್ನುತ್ತಾರೆ.

9.ನಿಪಿ-1ರ ಪಂಚನಾಮೆಯ ಕ್ರಮಸಂಖ್ಯೆ 2ರ ಐಟಂ ನಂಬರ್ 4ರಲ್ಲಿ ನಾನು ಕೆಲವು ನೋಟ್ ಬುಕ್ ಗಳು ಸಿಕ್ಕಿವೆ ಎಂದು ಹೇಳಿ ಅವುಗಳ ಮೌಲ್ಯ 2000ಎಂದು ಕಾಣಿಸಿದ್ದೇನೆ, ಆದರೆ ವಿದ್ಯಾಭ್ಯಾಸದ ಖರ್ಚಿನ ಬಾಬ್ತು ಎಂದು ಕೂಡ ಅದರ ಮೌಲ್ಯವನ್ನು ಪರಿಗಣಿಸಿದ್ದೇವೆ, ಹೀಗಿರುವಾಗ 2 ಬಾರಿ ಮೌಲ್ಯಮಾಪನ ಮಾಡಿದ್ದೇವೆ ಎಂದರೆ ಸಾಕ್ಷಿಯು ಅದನ್ನು ನಾನು ಮಾಡಿಲ್ಲ ಎನ್ನುತ್ತಾರೆ.

10.ಅದೇ ರೀತಿ ನಿಪಿ-1ರ ಪಂಚನಾಮೆಯ ಕ್ರಮಸಂಖ್ಯೆ 2ರ ಐಟಂ ನಂಬರ್ 9ರಲ್ಲಿ ಕಾಣಿಸಿರುವ 82,450ನ್ನು ಖರ್ಚಿನ ಬಾಪ್ತು ಎಂದು ಕಾಣಿಸಿದ್ದೇವೆ ಎಂದರೆ ಸಾಕ್ಷಿಯು ದೋ.ಪಟ್ಟಿ ಸಲ್ಲಿಸಿರುವವರು ಕಾಣಿಸಿದ್ದಾರೆ, ಆದ್ದರಿಂದ ನನಗೆ ಗೊತ್ತಿಲ್ಲ ಎನ್ನುತ್ತಾರೆ.

11.ನಾನು ಸುಮಾರು 3 ತಿಂಗಳ ಈ ಪ್ರಕರಣದಲ್ಲಿ ತನಿಖೆ ನಡೆಸಿರುತ್ತೇನೆ. ನನ್ನ ಅವಧಿಯಲ್ಲಿ ನಾನು ಅನುಸೂಚಿ 1 ರಿಂದ 23ನ್ನು ಪರಿಶೀಲನೆ ಮಾಡಿಲ್ಲ. ನಿಪಿ-1 ರಲ್ಲಿ ಕಾಣಿಸಿರುವ ಎಲ್ಲಾ ವಸ್ತುಗಳ ಮೌಲ್ಯಮಾಪನವನ್ನು ದಾಳಿಯ ದಿನಾಂಕಕ್ಕೆ ನಿಗಧಿಪಡಿಸಿರುವುದು ಎಂದರೆ ಸರಿ.

12.ನಿಪಿ-1 ರ ಮನೆಯಲ್ಲಿ ಆರೋಪಿತರು ಎಷ್ಟು ವರ್ಷಗಳಿಂದ ವಾಸವಿದ್ದಾರೆಂದು ನಾನು ತನಿಖೆ ಮಾಡಿಲ್ಲ. ಯಾರೆಲ್ಲ ವಾಸ ಮಾಡುತ್ತಿದ್ದರೆಂದು ನಾನು ತನಿಖೆ ಮಾಡಿಲ್ಲ. ಹಲವಾರು ವರ್ಷಗಳಿಂದ ಅವರು ವಾಸ ಮಾಡುತ್ತಿದ್ದಾರೆಂದರೆ ಇರಬಹುದು. ಹಾಗಾಗಿ ಕೆಲವು ವಸ್ತುಗಳು ವಂಶಪಾರಂಪರ್ಯವಾಗಿ ಬಂದಿರಬಹುದು ಇರಬಹುದು ಎಂದರೆ ಇರಬಹುದು. ಹಾಗೆಯೇ ಅನೇಕ ವಸ್ತುಗಳು ಉಡುಗೊರೆ ರೂಪದಲ್ಲೂ ಬಂದಿರುತ್ತದೆ ಎಂದರೆ ಇರಬಹುದು. ಆದ್ದರಿಂದ ನಿಪಿ-1ರಲ್ಲಿ

ಕಾಣಿಸಿದ ವಸ್ತುಗಳಲ್ಲಿ ವಂಶಪಾರಂಪರ್ಯವಾಗಿ ಮತ್ತು ಉಡುಗೊರೆಯಾಗಿ ಬಂದಿರುವ ವಸ್ತುಗಳು ಇರುತ್ತವೆ ಎಂದರೆ ಸಾಕ್ಷಿಯು ಇರಬಹುದು, ಅದನ್ನು ಆರೋಪಿತರು ಹೇಳಬೇಕು ಎನ್ನುತ್ತಾರೆ.

13.ನಿಪಿ-1ರ ಪಂಚನಾಮೆಗೆ ಮತ್ತು ಇನ್ನೆರಡು ಶೋಧನಾ ವಾರೆಂಟ್ ಗೆ ಸಂಬಂಧಿಸಿದಂತೆ ಪಂಚನಾಮೆ ವಿಚಾರವನ್ನು ಆರೋಪಿಗೆ ಓದಿ ಹೇಳಿದೆ ಮತ್ತು ವಿವರಿಸಿದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

14.ನಿಪಿ-1 ಮತ್ತು ಇನ್ನೆರಡು ಪಂಚನಾಮೆಗಳ ಕಾಲದಲ್ಲಿ ವಶಪಡಿಸಿಕೊಂಡ ವಸ್ತುಗಳ ಪಟ್ಟಿ ತಯಾರಿಸಿ ಅದನ್ನು ಆರೋಪಿತರಿಗೆ ನೀಡಿ ಅದಕ್ಕೆ ಅವರ ಸಹಿ ಪಡೆದುಕೊಳ್ಳುವ ಪ್ರಯತ್ನ ನಾನು ಮಾಡಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಯಾವ ಪಂಚನಾಮೆ ಸಮಯದಲ್ಲೂ ನಾನು ಖುದ್ದು ಹಾಜರಿರಲಿಲ್ಲ ಎನ್ನುತ್ತಾರೆ. ಒಂದು ವೇಳೆ ಪಂಚನಾಮೆ ಮಾಡಿದ ತನಿಖಾಧಿಕಾರಿಯು ಆ ವಸ್ತುಗಳ ಪಟ್ಟಿ ತಯಾರಿಸಿ ಆರೋಪಿತರ ಸಹಿ ಪಡೆದುಕೊಂಡಿದ್ದಲ್ಲಿ ಆ ದಾಖಲೆಯನ್ನು ಪಂನಾಮೆಯೊಂದಿಗೆ ಹಾಜರುಪಡಿಸುತ್ತಿದ್ದರು ಎಂದರೆ ಸರಿ. ಅಂತಹ ದಾಖಲೆಯನ್ನು ಪಂಚನಾಮೆಯೊಂದಿಗೆ ನನ್ನ ಮುಂದೆ ಹಾಜರುಪಡಿಸಿಲ್ಲ. ಹೀಗಿರುವಾಗ ಆ ರೀತಿ ವಸ್ತುಗಳ ಪಟ್ಟಿ ತಯಾರಿಸಿ ಆರೋಪಿತರಿಗೆ ನೀಡಿ ಅವರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ.

15.ಆರೋಪಿತರ ತಂದೆ-ತಾಯಿ ಏನು ಕೆಲಸ ಮಾಡುತ್ತಿದ್ದರು, ಅವರಿಗೆ ಆಸ್ತಿ ಇತ್ತಾ ಎಂಬ ಬಗ್ಗೆ ತನಿಖೆಯನ್ನು ನಾನು ಮಾಡಿಲ್ಲ. ಆರೋಪಿತರ ಸಹೋದರಿಯ ಬಗ್ಗೆ ಕೂಡ ನಾನು ತನಿಖೆ ನಡೆಸಿಲ್ಲ. ಶಾಂತಿಗ್ರಾಮದಲ್ಲಿ ಆರೋಪಿತರ ತಾಯಿಗೆ ಸೇರಿದ ಪ್ರಾವಿಜನ್ ಸ್ಟೋರ್ ಮತ್ತು ಮನೆ ಬಗ್ಗೆ ತನಿಖೆ ನಡೆಸಿದ್ದೇನಾ ಎಂದರೆ ಸಾಕ್ಷಿಯು ಮಾಹಿತಿ ಬಂದಿತ್ತು ಆದರೆ ನಾನು ತನಿಖೆ ನಡೆಸಿಲ್ಲ ಎನ್ನುತ್ತಾರೆ. ಆರೋಪಿತರ ಅಕ್ಕ ವಿಜಯಲಕ್ಷ್ಮಿ ಸುದರ್ಶನ್ ಸ್ಟೋರ್ಸ್ ಎಂಬ ಅಂಗಡಿ ನಡೆಸುತ್ತಿದ್ದರು ಅದಕ್ಕೆ ತಿಂಗಳ ಬಾಡಿಗೆಯನ್ನು ಅಂದರೆ ವಾರ್ಷಿಕವಾಗಿ 63ಸಾವಿರ ರೂಪಾಯಿಯನ್ನು ಆರೊಪಿತರ ತಾಯಿ ಪಾವತಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗೆಯೇ ವಿಜಯಲಕ್ಷ್ಮಿಯವರು ಗಂಡನನ್ನು ಬಿಟ್ಟಿದ್ದು

ತವರುಮನೆಯಲ್ಲೇ ತಾಯಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು, ಆ ಬಾಡಿಗೆ ಬಾಬ್ತು ಒಟ್ಟು 1,90,200ರೂಪಾಯಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**